## ದಿನಾಂಕ 29/07/2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 6(62)/2010–11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೃಷ್ಣರಾಜಪುರ–ಬೈಯ್ಯಪ್ಪನಹಳ್ಳಿ ಮಧ್ಯೆ ಬರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ 134 ಬಿ.ಎಫ್.ಸಿ.ಐ. ಗೋಡೌನ್ (ಕೆ.ಆರ್.ಪುರಂ) ಬಳಿ ರೈಲ್ವೆ ಕೆಳಸೇತುವೆಯನ್ನು ನಿರ್ಮಾಣ ಮಾಡುವ ಕಾಮಗಾರಿಗೆ ಸಂಬಂಧಿಸಿದಂತೆ, ದಿನಾಂಕ:14/07/2008 ರ ಐ.ಡಿ.ಡಿ ಸಭೆಯ ತೀರ್ಮಾನದಂತೆ, ರೈಲ್ವೆ ಇಲಾಖೆಯ ಅಧಿಕಾರಿಗಳು, ಮೆ: ರೈಟ್ಸ್ ಮತ್ತು ಪಾಲಿಕೆಯ ಅಧಿಕಾರಿಗಳಿಂದ ಸ್ಥಳ ವೀಕ್ಷಣೆ ಮಾಡಲಾಯಿತು. ದಿನಾಂಕ:04/01/2009 ರಂದು ಮಾನ್ಯ ಕೆ.ಆರ್.ಪುರಂ. ಕ್ಷೇತ್ರದ ಶಾಸಕರು ಮತ್ತು ನೈರುತ್ಯ ಇಲಾಖೆಯ ಅಧಿಕಾರಿಗಳು, ಪಾಲಿಕೆಯ ಅಧಿಕಾರಿಗಳ ಜೊತೆಯಲ್ಲಿ ಪುನ: ಸ್ಥಳ ವೀಕ್ಷಣೆ ಮಾಡಿ ಸ್ಥಳೀಯ ಸಾರ್ವಜನಿಕರ ಜೊತೆಯಲ್ಲಿ ಚರ್ಚಿಸಿ ಅಂತಿಮವಾಗಿ ರೈಲ್ವೆ ಹಳಿಗೆ ಅಡ್ಡಲಾಗಿ ಆರ್.ಯು.ಬಿ. ನಿರ್ಮಾಣ ಮಾಡಲು ತೀರ್ಮಾನಿಸಿದರು. ಸದರಿ ಕಾಮಗಾರಿಗೆ ರೈಲ್ವೆ ಇಲಾಖೆಯಿಂದ ತಯಾರಿಸಿ ಸಲ್ಲಿಸಿದ್ದ ಜಿ.ಎ.ಡಿಗೆ ಮಾನ್ಯ ಆಯುಕ್ತರಿಂದ ದಿನಾಂಕ:04/02/2009 ರಂದು ಅನುಮೋದಿಸಲ್ಪಟ್ಟಿರುತ್ತದೆ.

ರೈಲ್ವೆ ಇಲಾಖೆಯವರು ದಿನಾಂಕ:25/05/2010 ರಂದು ಕಾಮಗಾರಿ ಕೆಲಸಕ್ಕೆ ಅಂದಾಜು ಪಟಿಯನ್ನು ತಯಾರಿಸಿ ಸಲ್ಲಿಸಿದ್ದು, ಪಾಲಿಕೆಯ ಅನುಮೋದನೆಯನ್ನು ಕೋರಿರುತ್ತಾರೆ.

ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

ಈ ಯೋಜನೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2009–10 ನೇ ಸಾಲಿನ ಆಯವ್ಯಯದಲ್ಲಿ ಸೇರಿದ್ದು, ರೂ.75.00 ಲಕ್ಷಗಳ ಅನುದಾನವು ಲಭ್ಯವಿರುತ್ತದೆ. ಸೇತುವೆ ನಿರ್ಮಾಣ, ಅಪ್ರೋಚ್ ರಸ್ತೆ ನಿರ್ಮಾಣ ಮತ್ತು ಯುಟಿಲಿಟಿ ಸ್ಥಳಾಂತರ ಇತ್ಯಾದಿಗಳನ್ನು ರೈಲ್ವೆ ನಿಯಮಗಳಿಗನುಗುಣವಾಗಿ ತಯಾರಿಸಿರುವ ಅಂದಾಜು ಪಟ್ಟಿಯ ಮೊತ್ತ ರೂ.10,13,25,088/– ಗಳಿಗೆ ಪಾಲಿಕೆಯ ಅನುಮೋದನೆಯನ್ನು ದೃಢೀಕರಿಸುವ ಸಲುವಾಗಿ ಮೇಲು ರುಜು ಮಾಡಿ ಕಳುಹಿಸಿಕೊಡಲು ಕೋರಿರುತ್ತಾರೆ. ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ, ಸಾರ್ವಜನಿಕ ಸಂಪರ್ಕಗಳ ಸ್ಥಳಾಂತರಕ್ಕೆ ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಮೊತ್ತವು ಕಡಿಮೆಯಾಗಿದ್ದು, ಈ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗಳಿಂದ ಕೈಗೊಳ್ಳಲು ಪ್ರಾರಂಭಿಕ ಅನುದಾನ ರೂ.1,00,00,000.00 ಗಳ ಅನುದಾನವನ್ನು ಸೇರಿಸಿಕೊಳ್ಳಲಾಗಿದೆ. ಅಂದಾಜು ಪಟ್ಟಿಯಲ್ಲಿ ಯೋಜನೆಗೆ ಅಗತ್ಯವಾದ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳಲು ಅನುದಾನವನ್ನು ಸೇರಿಸಿಕೊಂಡಿರುವುದಿಲ್ಲ. ಆದಕಾರಣ, ಈ ಕೆಳಕಂಡ ಕಾಮಗಾರಿಗಳ ನಿರ್ವಹಣೆಯನ್ನು ಪಾಲಿಕೆಯ ವತಿಯಿಂದ ವಹಿಸಬೇಕಾಗಿರುವುದರಿಂದ ರೂ.2.00 ಕೋಟಿಗಳ ಪ್ರಾರಂಭಿಕ ಅನುದಾನವನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದಾಗಿದೆ.

ಸದರಿ ಯೋಜನೆಗೆ ಸಂಬಂಧಿಸಿದ ಘೋಶ್ವಾರೆ ಅಂದಾಜು ಪಟ್ಟಿಯನ್ನು ರೂ.13,25,00,000.00 ಗಳಿಗೆ ತಯಾರಿಸಿದ್ದು, ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಭಾಗ–I | | |
| 1 | ರೈಲ್ವೆ ಇಲಾಖೆಯ ಅಂದಾಜು ಮೊತ್ತ (ಮೇಲ್ಸೇತುವೆ ಹಾಗೂ ಅಪ್ರೋಚ್ ರಸ್ತೆಯ ನಿರ್ಮಾಣ ಕಾಮಗಾರಿಗೆ) | 10,13,25,088.00 |
| | ಒಟ್ಟು | 10,13,25,088.00 |
| ಭಾಗ– II | | |
| 1 | ಭೂಸ್ವಾಧೀನ ಪ್ರಕ್ರಿಯೆ ಮೊತ್ತ | 2,00,00,000.00 |
| 2 | ಬಾಕ್ಸ್ ಮತ್ತು ಅಪ್ರೋಚ್ ರಸ್ತೆಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಅಗತ್ಯವಿರುವ ಮೊತ್ತ | 10,00,000.00 |
| 3 | ನಾಗರೀಕ ಸೌಲಭ್ಯಗಳ ಸ್ಥಳಾಂತರಕ್ಕೆ ಅಗತ್ಯವಿರುವ ಮೊತ್ತ | 1,00,00,000.00 |
| 4 | ಸಾಧಿಲ್ವಾರು ಮತ್ತು ಇತರೆ ಮೊತ್ತ | 1,74,912.00 |
| | **ಒಟ್ಟು** | **3,11,74,912.00** |
| | **ಒಟ್ಟಾರೆ ಮೊತ್ತ** | 13,25,00,000.00 |

ಸದರಿ ಯೋಜನೆಗೆ ಸಂಬಂಧಿಸಿದ ಘೋಶ್ವಾರೆ ಅಂದಾಜು ಪಟ್ಟಿಯನ್ನು ರೂ.13,25,00,000/– ಗಳಿಗೆ ತಯಾರಿಸಲಾಗಿರುತ್ತದೆ. ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ;

1. ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ. 13,25,00,000.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಪಾಲಿಕೆ ವತಿಯಿಂದ ನಿರ್ವಹಿಸಬಹುದಾದ ಅಂದಾಜು ಪಟ್ಟಿಯ ಮೊತ್ತ ರೂ.3,11,74,912.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
3. ಸದರಿ ಯೋಜನೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.

4. ಸದರಿ ಯೋಜನೆಗೆ ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಅಂದಾಜು ಪಟ್ಟಿಗೆ ಮೇಲು ರುಜು ಮಾಡಿ ನೈರುತ್ಯ ರೈಲ್ವೆಗೆ ಸಲ್ಲಿಸಲು ಅನುಮೋದನೆ ಹಾಗೂ ರೈಲ್ವೆ ಇಲಾಖೆ ವತಿಯಿಂದ ಟೆಂಡರ್ ಆಹ್ವಾನ ಮಾಡುವಂತೆ ಕೋರಲು ಅನುಮೋದನೆ.

ಮೇಲ್ಕಂಡ ನಾಲ್ಕು ಅಂಶಗಳಿಗೆ (4) ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26/07/2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26/07/2010ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಸಿ.ಕೆ.ರಾಮಮೂರ್ತಿರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:26/07/2010 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು